ವರ್ಷ	ಕಾಯ್ದಿರಿಸಿದ ಹಣ
1997-98	ರೂ. 13.62 ಕೋಟಿಗಳು
1998-99	ರೂ. 15.23 ಕೋಟಿಗಳು
1999-2000	ರೂ. 15.73 ಕೋಟಿಗಳು

ಆ) ಬೇಡಿಕೆಗಳು ವರ್ಷ ವರ್ಷ ಹೆಚ್ಚಾಗುತ್ತಿರುವುದರಿಂದ ಹಂಚಿಕೆ ಕಡಿಮೆ ಎನಿಸುತ್ತದೆ.

ಇ) ಪ್ರಸ್ತುತ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ.

ಕೃಷ್ಣಾ ನದಿಗೆ ಪ್ರವಾಹ ನಿಯಂತ್ರಣ ತಡೆಗೋಡೆ ನಿರ್ಮಿಸುವ ಕಾಮಗಾರಿ ಬಗ್ಗೆ

2836 (3556) ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಹಳೇ ಯಡೂರ ಗ್ರಾಮದ ಹತ್ತಿರ ಇರುವ ಕೃಷ್ಣಾ ನದಿಗೆ ಪ್ರವಾಹ ನಿಯಂತ್ರಣ ಗೋಡೆ ನಿರ್ಮಿಸುವ ಕಾಮಗಾರಿಯು ಯಾವ ಸಾಲಿನಲ್ಲಿ ಮಂಜೂರಾಯಿತು; ಮಂಜೂರಾದ ಹಣವೆಷ್ಟು;

ಆ) ಈ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಯಿತು; ಕಾಮಗಾರಿ ಕೆಲಸವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಾಮಗಾರಿ ಕೆಲಸವನ್ನು ಯಾವಾಗ ಪೂರ್ತಿಗೊಳಿಸಲಾಗುವುದು ವಿವರಣೆ ನೀಡುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬೆಳಗಾಂವ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಳೇ ಯಡೂರ ಪ್ರವಾಹ ನಿಯಂತ್ರಣ ಪ್ರಥಮ ಹಂತದ ಕಾಮಗಾರಿಗೆ 11:95ರಲ್ಲಿ 4.96 ಲಕ್ಷ ರೂ. ಗಳಿಗೆ ಮತ್ತು ದ್ವಿತೀಯ ಹಂತದ ಕಾಮಗಾರಿಗೆ ಫೆಬ್ರವರಿ 97ರಲ್ಲಿ ರೂ. 6.52 ಲಕ್ಷಗಳಿಗೆ ಮಂಜೂರಾತಿ ದೊರೆತಿದೆ.

ಆ) ಈ ಕಾಮಗಾರಿಗಳನ್ನು ಸೌದತ್ತಿ ತಾಲ್ಲೂಕಿನ ಹೂಲಿ ಗ್ರಾಮದ ಶ್ರೀ ಆರ್. ಟಿ. ಸುತಗಟ್ಟ, ಗುತ್ತಿಗೆದಾರರಿಗೆ ನೀಡಲಾಗಿತ್ತು. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕೆಲಸವನ್ನು ಪೂರ್ತಿಗೊಳಿಸದ ಕಾರಣ ಅರ್ಧಕ್ಕೆ ನಿಂತಿರುತ್ತದೆ. ಗುತ್ತಿಗೆಕಾರರನ್ನು 2:2000 ರಲ್ಲಿ ರದ್ದುಪಡಿಸಿ ಉಳಿಕೆ ಕಾಮಗಾರಿಗೆ ಮರು ಟೆಂಡರ್ ಕರೆದಿದ್ದು ಸದ್ಯದಲ್ಲಿಯೇ ಏಜನ್ಸಿ ಗೊತ್ತುಪಡಿಸಿ ಕಾಮಗಾರಿ ಮರು ಪ್ರಾರಂಭಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಕೆಲಸವನ್ನು ಮಾರ್ಚ್ 2001ರ ಒಳಗೆ ಪೂರ್ತಿಗೊಳಿಸಲಾಗುವುದು.